PW-04

**<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.</u>**

ಸ್ಪೇಷಲ್ (ಎಸ್.ಸಿ./ಎಸ್.ಟಿ.) ಸಂಖ್ಯೆ: 367/2020

ದಿಃ 27-05-2025

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

ಪ್ರಾಸಾ-04

ಶಿವಮ್ಮ

**<u>ಮುಂದುವರೆದು ಪಾಟೀ ಸವಾಲುಃ ಶ್ರೀ ಎಸ್.ವಾಯ್. ಆರೋಪಿಗಳ ಪರ ವಕೀಲರಿಂದಃ</u>**

3. ನನ್ನ ಗಂಡನಿಗೆ ಸಂಬಂಧಿಸಿದ್ದು ಒಂದು ಹಾಲಿನ ವಾಹನವಿರುತ್ತದೆ ಎಂಬುದು ಸರಿ.

4. ಚಾಸಾ-1 ಇವಳ ಮನೆಯ ಪಕ್ಕದಲ್ಲಿ ಇರುವ ರಸ್ತೆಯಿಂದ ತಿರುವಿನ ಮುಂದೆ ನಮ್ಮ ಮನೆಗೆ ಹೋಗಿ ಮುಟ್ಟಬೇಕಾಗುತ್ತದೆ ಎಂಬುದು ಸರಿ.

5. ಚಾಸಾ-1 ಇವಳು ಸರ್ಕಾರಿ ರಸ್ತೆಯ ಮೇಲೆ ಅತಿಕ್ರಮಣ ಮಾಡಿ ಮನೆ ಕಟ್ಟುವ ಸಮಯದಲ್ಲಿ ಸದರಿ ನಮ್ಮ ಹಾಲಿನ ವಾಹನ ಅಲ್ಲಿಂದ ಹಾಯ್ದು ಹೋಗಲು ತೊಂದರೆ ಆಗುತ್ತದೆ ಎಂದು ನಾವು ಮತ್ತು ಸದರಿ ಓಣಿಯ ಜನರು ತಕರಾರು ಮಾಡಿರುತ್ತೇವೆ ಎಂಬುದು ಸರಿಯಲ್ಲ.

PW-04

6. ವಿವಾದಿತ ಘಟನೆ ಸಮಯದಲ್ಲಿ ಕೋವಿಡ್ ಮಹಾಮಾರಿ ಜೋರಾಗಿ ನಡೆದಿತ್ತು ಎಂಬುದು ಸರಿ.

7. ಕೋವಿಡ್ ಮಹಾಮಾರಿ ಇದಿದ್ದರಿಂದ ಜನರು ಪರಸ್ಪರ ಕೂಡುದಾಗಲಿ ಅಥವಾ ಸೇರುವುದಾಗಲಿ ಕುರಿತು ನಿರ್ಬಂಧ ಹೇರಿದ್ದರು ಎಂಬುದು ಸರಿಯಲ್ಲ.

8. ಆ ಸಮಯದಲ್ಲಿ ಜನರು ಗುಂಪಾಗಿ ಕುಡಿತ್ತಿದ್ದಿದ್ದರೆ ಪೊಲೀಸರು ಅವರ ವಿರುದ್ಧ ಪ್ರಕರಣ ದಾಖಲಿಸುತ್ತಿದ್ದರು ಎಂದರೆ ಆಗ ನಾವು ಗುಂಪಾಗಿ ಕೂಡುತ್ತಿರಲಿಲ್ಲ ಎಂದು ಹೇಳುತ್ತೇನೆ.

9. ಸದರಿ ಘಟನೆ ಸಮಯದಲ್ಲಿ ನಮ್ಮ ಓಣಿಯ ಸುಮಾರು 20 ಜನರು ಕೂಡಿದ್ದರು.

10. ಆ ಸಮಯದಲ್ಲಿ ನಾನು, ಚಾಸಾ-3, 5 ರಿಂದ 7 ಮತ್ತು ಇತರರು ಇದ್ದೆವು.

11. ನಮ್ಮ ಓಣಿಯ ಜನರನ್ನು ಹೊರತುಪಡಿಸಿ ಬೇರೆ ಯಾರೂ ಅಲ್ಲಿ ಕೂಡಿರಲಿಲ್ಲ.

12. ಸದರಿ ಘಟನೆಯ ಸುಮಾರು ಅರ್ಧ ಗಂಟೆಯಿಂದ ಒಂದು ಗಂಟೆಯ ಕಾಲ ಸಾಯಂಕಾಲ 04 ರಿಂದ 05 ಗಂಟೆಯವರಗೆ ನಡೆದಿರುತ್ತದೆ.

13. ಘಟನೆಯ ನಡೆದಾಗ ನಾನು ನಮ್ಮ ಮನೆಯಲ್ಲಿದ್ದೆನು.

14. ಎರಡು ನಿಮಿಷದಲ್ಲಿ  ಚೀರಾಟ ಕೇಳಿಕೊಂಡು ನಾನು ಘಟನಾ ಸ್ಥಳಕ್ಕೆ ಹೋಗಿರುತ್ತೇನೆ.

15. ಆ ಸಮಯದಲ್ಲಿ ನಾನು ಒಬ್ಬಳೇ ಇದ್ದೆನು.

PW-04

16. ಘಟನೆಯಾದ ತಕ್ಷಣ ಚಾಸಾ-1 ಇವಳು ಆಸ್ಪತ್ರೆಗೆ ಹೋಗಿರುತ್ತಾಳೆ.

17. ನಮ್ಮ ಓಣಿಯ ಜನರು ಚಾಸಾ-1 ಇವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಸದರಿ ಜನರ ಹೆಸರು ನನಗೆ ಗೊತ್ತಿಲ್ಲ.

18. ನಾನು ಘಟನಾ ಸ್ಥಳದಲ್ಲಿ ಆ ಸಮಯದಲ್ಲಿ ನಾನು ಇರಲೇ ಇಲ್ಲ ಎಂದು ಎಂದು ಸೂಚಿಸುವುದು ಸರಿಯಲ್ಲ.

19. ಚಾಸಾ-1 ಇವಳು ಕಟ್ಟೆಯ ಮೇಲೆ ಕುಳಿತ್ತಿದ್ದಾಗ ಅವಳನ್ನು ಎಳೆದು ಜಗಳ ಮಾಡಿರುತ್ತಾರೆ.

20. ಚಾಸಾ-1 ಇವಳಿಗೆ ಗಾಯವಾಗಿದ್ದನ್ನು ನಾನು ನೋಡಿರಲಿಲ್ಲ ಆದರೆ ಎಡತೊಡೆಗೆ, ಬೆಣ್ಣಿಗೆ ಹೊಡೆದಿದ್ದು ನಾನು ನೋಡಿರುತ್ತೇನೆ.

21. ಚಾಸಾ-1 ಇವಳೊಂದಿಗೆ ಕಟ್ಟೆಯ ಮೇಲೆ ಚಾಸಾ-2 ಸಹ ಕುಳಿತಿದ್ದಳು.

22. ಸದರಿ ವಿಚಾರವನ್ನು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ.

23. ಚಾಸಾ-1 ಇವಳು ಚಾಸಾ-2 ಇವಳೊಂದಿಗೆ ಕಟ್ಟೆಯ ಮೇಲೆ ಕುಳಿತುಕೊಂಡು ಮಾತನಾಡುತ್ತಿದ್ದರು ಎಂದು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ.

24. ಚಾಸಾ-1 ಇವಳು ಯಾರೊಂದಿಗೆ ಕಟ್ಟೆಯ ಮೇಲೆ ಕುಳಿತುಕೊಂಡು ಮಾತನಾಡುತ್ತಿದ್ದರು ಎಂದು ನಾನು ಪೊಲೀಸರ ಮುಂದೆ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ.

25. ಯಾವ ಆರೋಪಿ ಯಾರಿಗೆ, ಯಾವುದರಿಂದ, ಎಲ್ಲಿಗೆ, ಮತ್ತು ಯಾರೂ ಜಾತಿ ನಿಂದನೆ ಮಾಡಿ ಬೈದಿರುತ್ತಾರೆಂದು ನಾನು ಪೊಲೀಸರ ಮುಂದೆ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ.

26. ಚಾಸಾ-2 ಇವಳು ಉಪಸ್ಥಿತಳು ಇದ್ದಳು ಎಂದು ನಾನು ಪೊಲೀಸರ ಮುಂದೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

27. ವಿವಾದಿತ ಘಟನಾ ಸ್ಥಳ ನೇಕಾರರ ಕಾಲೋನಿ ಆಗಿದ್ದು, ಅಲ್ಲಿ ಎಲ್ಲರೂ ನೇಕಾರರು ಮತ್ತು ಆರೋಪಿತರು ಸಹ ನೇಕಾರಾಗಿರುವುದರಿಂದ ಅಲ್ಲಿಯೇ ವಾಸ ಮಾಡುತ್ತಾರೆ ಎಂಬುದು ಸರಿ.

28. 1 ನೇ ಆರೋಪಿತಳು ದೇವದುರ್ಗದ ಪಟ್ಟಣ ಪಂಚಾಯಿತಿಯ ಸದಸ್ಯಳಾಗಿ ಚುನಾಯಿತಗೊಂಡಿದ್ದಳು ಎಂದರೆ ಸರಿ.

29. ಅಬು ಮೌಲಾ ಮತ್ತು ಪಾಟೀಲ್ ಓಣಿ ವಾರ್ಡಿನಿಂದ 1 ನೇ ಆರೋಪಿತಳು ಟಿ.ಎಮ್.ಸಿ. ಯ ಸದಸ್ಯಳಾಗಿದ್ದಳು ಎಂಬುದು ಸರಿ.

30. ನಮ್ಮ ಬೀದಿಯ ರಹವಾಸಿಗಳು ಬಹಿರ್ದೆಸೆಗೆಂದು ಅರಣ್ಯ ಇಲಾಖೆಗೆ ಸಂಬಂದಪಟ್ಟ ಗುಡ್ಡದ ಪಕ್ಕಕ್ಕೆ ಹೋಗುತ್ತಿದ್ದರು ಎಂದರೆ ಸರ.

31. ಆ ಕಾರಣಕ್ಕೆ ಸಿ.ಎಮ್.ಸಿ. ಯವರು ಗುಡ್ಡದ ಪಕ್ಕದಲ್ಲಿ ಕಂಪೌಂಡ್ ಕಟ್ಟಿದ್ದರು ಎಂದರೆ ಗುಡ್ಡದಿಂದ ನೀರು ಬರಬಾರದು ಎಂದು ಹೇಳುತ್ತೇನೆ.

32. ಆ ಸಮಯದಲ್ಲಿ 1 ನೇ ಆರೋಪಿತಳು ಟಿ.ಎಮ್.ಸಿ. ಸದಸ್ಯಳಾಗಿದ್ದಳು ಎಂದರೆ ನನಗೆ ಗೊತ್ತಿಲ್ಲ.

33. ವಿನಾರಕಣ ಸದರಿ ಕಂಪೌಂಡ್ ನ್ನು ಕಟ್ಟಿಸಿರುತ್ತಾರೆಂದು 1 ನೇ ಆರೋಪಿತಳ ವಿರುದ್ಧ ನಮ್ಮ ಓಣಿಯ ಎಲ್ಲ ಜನರು ಸಿಟ್ಟು ಇಟ್ಟುಕೊಂಡಿದ್ದೆವು ಎಂದರೆ ಸರಿಯಲ್ಲ.

34. ಆ ರೀತಿ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

35. ಈ ದಿನ ನಾನು, ಚಾಸಾ-1, ಅವಳ ಗಂಡ ಚಾಸಾ-3, 6 ಮತ್ತು 7 ಕೂಡಿಯೇ ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂಬುದು ಸರಿ.

36. ಈ ದಿನ ನ್ಯಾಯಾಲಯದ ಮುಂದೆಯೇ ನಾವೆಲ್ಲರೂ ಸಾಕ್ಷಿ ಏನೆಂದು ನುಡಿಯಬೇಕು ಎಂಬುದು ಚರ್ಚೆ ಮಾಡಿಕೊಂಡು, ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

37. ಚಾಸಾ-2 ಇವಳು ಇದ್ದಳು ಎಂದು ನಾನು ಪೊಲೀಸರ ಮುಂದೆ ಹೇಳಿ ಬರೆಸಿರುವುದಿಲ್ಲ ಎಂಬುದು ಸರಿಯಲ್ಲ.

38. ಸುಮಾರು 5-00 ಗಂಟೆಗೆ ಆರೋಪಿತರಿಬ್ಬರೂ ಕೂಡಿ ಬಂದು ಚಾ.ಸಾ-1 ರವರಿಗೆ ಮಾದಿಗ ಸೂಳೆ ನಿನ್ನದೇ ಬಹಳ ಆಗಿದೆ ಎಲ್ಲಾರನ್ನು ಸೇರಿಸಿಕೊಂಡು ತಕರಾರು ಮಾಡುತ್ತಿಯಾ ಎಂದು ಕಟ್ಟೆಯ ಮೇಲೆ ಕುಳಿತಿದ್ದ ಚಾ.ಸಾ-1 ರವರನ್ನು ಕೂದಲು ಹಿಡಿದು ಎಳೆದು ಮಾದಿಗ ಸೂಳೆ ನಿನ್ನನ್ನು ಬಿಡಬಾರದು ಎಂದು ಎಳೆದಾಡಿ ಕೈಯಿಂದ ಬೆನ್ನಿಗೆ,

ಹೊಟ್ಟೆಗೆ ಕಾಲಿನಿಂದ ಒದ್ದಿರುತ್ತಾರೆ, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

39. ಆಗ ಅವರು ಚೀರಾಡುತ್ತಿದ್ದಾಗ ಅಲ್ಲಿಯೇ ಇದ್ದ ನಾನು ಮತ್ತು ಚಾ.ಸಾ-2, 3, 5 ರಿಂದ 7 ರವರು ಬಿಡಿಸಿದೆವು, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

40 ಆಗ ಆರೋಪಿತರು ನಮಗೂ ಸಹ ಬಿಡಿಸಲು ಬಂದರೆ ನಿಮ್ಮನ್ನು ಸಹ ಕೊಲೆ ಮಾಡುವದಾಗಿ ಕೊಲೆ ಬೆದರಿಕೆ ಹಾಕಿದರು, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

41. ಚಾ.ಸಾ-1 ರವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಬಂದು ದೂರು ಕೊಟ್ಟಿದ್ದಾಳೆ, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

42. ನಂತರ ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

43. ಯಾರು ಬಂದು ಏನು ಮಾಡಿಕೊಳ್ಳುತ್ತಾರೆ ನಾವು ನೋಡಿಕೊಳ್ಳುತ್ತೇವೆ ಎಂದು ಬೆದರಿಕೆ ಹಾಕಿದ್ದಾರೆ, ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

PW-04

44. ಸದರಿ ಜಗಳ ಸಮಯದಲ್ಲಿ ನಾನು, ಚಾಸಾ-3, 5 ರಿಂದ 7 ಜಗಳ ಬಿಡಿಸುವುದಾಗಿ ಚಾಸಾ-2 ಇವಳು ಸಹ ಇದ್ದಳು ಎಂದು ನಾನು ಪೊಲೀಸರ ಮುಂದೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

45 ಈ ದಿನ ದ್ವೇಷ ಸಾಧಿಸುವ ಉದ್ದೇಶದಿಂದ ಚಾಸಾ-1 ಇವಳ ಹೇಳಿಕೆಯ ಮೇರೆಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಜಿ.ಡಿ.ಮಹಾವರ್ಕರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀರು
ರಾಯಚೂರು.